1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 13

CW- 11

ಪ್ರ. ಬೋ. ದಿನಾಂಕಃ 04-12-2024

ಹೆಸರು ಶ್ರೀ/ ಶ್ರೀಮತಿ : ಶಿವಕುಮಾರ್

ತಂದೆ/ಗಂಡನ ಹೆಸರು : ವೀರಭದ್ರಪ್ಪ

ವಯಸ್ಸು : 35 ವರ್ಷ

ಉದ್ಯೋಗ : ಲಾರಿ ಚಾಲಕ

ವಾಸ : ಹರಿಹರ .

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-10 ನನಗೆ ಗೊತ್ತು. ನಿಪಿ.30 ಫೋಟೋದಲ್ಲಿ ನಾನು ಇರುತ್ತೇನೆ, ಅದರಲ್ಲಿ ಬೈಕ್ ಇದೆ, ಸದರಿ ಬೈಕ್ ಯಾರಿಗೆ ಸಂಬಂಧಪಟ್ಟಿದ್ದು , ಯಾವ ಕಾರಣಕ್ಕೋಸ್ಕರ ಪೊಲೀಸರು ಏನು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.31 ಮಹಜರ್ ನಲ್ಲಿ ನನ್ನ ರುಜು ಇದ್ದು , ನನ್ನ ಸಹಿಯನ್ನು ನಿಪಿ.31(ಬಿ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ನಿಪಿ.30 ಫೋಟೊದಲ್ಲಿರುವ ಬೈಕನ್ನು ಆರೋಪಿತರು ಕೃತ್ಯಕ್ಕೆ ಬಳಸಿಕೊಂಡಿರುತ್ತಾರೆ ಅಂತಾ, ನಂತರ ಮಹಾದೇವಪ್ಪ ಇವರು ಸದರಿ ಬೈಕನ್ನು ಹಾಜರುಪಡಿಸಿದ್ದು , ಅದರ ಬಗ್ಗೆ ಪೊಲೀಸರು ನನ್ನ ಸಮಕ್ಷಮ ನಿಪಿ.31 ಮಹಜರ್ ಮಾಡಿ, ನಿಪಿ.30 ಫೋಟೋ ತೆಗೆದು , ಸದರಿ ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆ ಎನ್ನುವುದು ಸುಳ್ಳು. ವಿಷಯ ಗೊತ್ತಿದ್ದರೂ ಸಹ ನಾನು ಆರೋಪಿತರಿಗೆ ಸಹಾಯ

ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀಸವಾಲುಃ– 1 ಮತ್ತು 2 ನೇ ಆರೋಪಿತರಪರ ಶ್ರೀ ಪಿ.ಬಿ ವಕೀಲರಿಂದ.

ವಕೀಲರು ಹಾಜರಿದ್ದು , ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 12

CW- 10

ಪ್ರ. ಬೋ. ದಿನಾಂಕಃ 04-12-2024

ಹೆಸರು ಶ್ರೀ/ ಶ್ರೀಮತಿ : ಅಜಿತ್ ಕುಮಾರ್

ತಂದೆ/ಗಂಡನ ಹೆಸರು : ಶಿವಕುಮಾರ್

ವಯಸ್ಸು : 31 ವರ್ಷ

ಉದ್ಯೋಗ : ಲಾರಿ ಚಾಲಕ

ವಾಸ : ಹರಿಹರ .

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-11 ನನಗೆ ಗೊತ್ತು. ಒಂದು ಫೋಟೋವನ್ನು ನೋಡಲಾಗಿ ನಾನು ಅದರಲ್ಲಿ ಇದ್ದೇನೆ. ಸದರಿ ಫೋಟೋದಲ್ಲಿ ಹಳದಿ ಶರ್ಟ್ ಹಾಕಿರುವ ವ್ಯಕ್ತಿ ನಾನೇ ಇರುತ್ತೇನೆ. ನನ್ನ ಪಕ್ಕದಲ್ಲಿರುವ ವ್ಯಕ್ತಿ ಚಾಸಾ-11 ಶಿವಕುಮಾರ್ ಇರುತ್ತಾರೆ. ಸಾಕ್ಷಿ ಗುರುತಿಸಿದ ಫೋಟೋವನ್ನು ನಿಪಿ.30 ಎಂದು ಗುರುತಿಸಲಾಯಿತು.

ಈಗ ಸುಮಾರು ಒಂದು ವರ್ಷದ ಹಿಂದೆ ನಾನು ದಾವಣಗೆರೆಯಿಂದ ಹರಿಹರ ಬಸ್ ನಿಲ್ದಾಣಕ್ಕೆಹೋಗುತ್ತಿರುವಾಗ ಒಬ್ಬರು ಕರೆದರು. ನಿಪಿ.30 ಫೋಟೋದಲ್ಲಿರುವ ಬೈಕನ್ನುಯಾರು ಹಾಜರುಪಡಿಸಿರುತ್ತಾರೆ ಎಂದು ಗೊತ್ತಿಲ್ಲ. ಪಕ್ಕದಲ್ಲಿ ನಿಂತಿರುವ ಒಬ್ಬ ವ್ಯಕ್ತಿಯ ಬೈಕ್ ಎಂದು ತಿಳಿಸಿದರು , ಸಹಿ ಪಡೆದು ಕಳುಹಿಸಿದರು. ಸದರಿ ಬೈಕ್ ಅಮಾನತ್ತು ಮಹಜರ್ ನೋಡುತ್ತಿದ್ದು , ಅದನ್ನು ನಿಪಿ.31 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಪಿ.31(ಎ) ಎಂದು ಗುರುತಿಸಲಾಯಿತು. ಬೈಕ್ ಅವರಿಗೆ ಕೊಟ್ಟಿದ್ದೇವೆ ಎಂದು ಹೇಳಿ ಸಹಿ ಪಡೆದರು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ–</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ನಿಪಿ.30 ಫೋಟೊದಲ್ಲಿರುವ ಬೈಕನ್ನು ಆರೋಪಿತರು ಕೃತ್ಯಕ್ಕೆ ಬಳಸಿಕೊಂಡಿರುತ್ತಾರೆ ಅಂತಾ, ನಂತರ ಮಹಾದೇವಪ್ಪ ಇವರು ಸದರಿ ಬೈಕನ್ನು ಹಾಜರುಪಡಿಸಿದ್ದು , ಅದರ ಬಗ್ಗೆ ಪೊಲೀಸರು ನನ್ನ ಸಮಕ್ಷಮ ನಿಪಿ.31 ಮಹಜರ್ ಮಾಡಿ , ನಿಪಿ.30 ಫೋಟೋ ತೆಗೆದು , ಸದರಿ ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆ ಎನ್ನುವುದು ಸುಳ್ಳು. ವಿಷಯ ಗೊತ್ತಿದ್ದರೂ ಸಹ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀಸವಾಲುಃ</u>– 1 ಮತ್ತು 2 ನೇ ಆರೊಪಿತರಪರ ಶ್ರೀ ಪಿ.ಬಿ ವಕೀಲರಿಂದ.

ವಕೀಲರು ಹಾಜರಿದ್ದು , ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆಃ</u>– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 11

CW- 08

ಪ್ರ. ಬೋ. ದಿನಾಂಕಃ 04-12-2024

ಹೆಸರು ಶ್ರೀ/ ಶ್ರೀಮತಿ : ಗೀತಾ ಆರ್

ತಂದೆ/ ಗಂಡನ ಹೆಸರು : ಚಂದ್ರಶೇಖರ್ ಎಂ. ಕೆ

ವಯಸ್ಸು : 53 ವರ್ಷ

ಉದ್ಯೋಗ : ಸ್ಟಾಫ್ ನರ್ಸ್, ಹರಿಹರ ಸಾರ್ವಜನಿಕ ಆಸ್ಪತ್ರೆ

ವಾಸ : ಹರಿಹರ .

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಹದಿಮೂರು ವರ್ಷದಿಂದ ನಾನು ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕೆಲಸ ಮಾಡುತ್ತಿದ್ದೇನೆ. ಚಾಸಾ-9 ನಮ್ಮ ಆಸ್ಪತ್ರೆಯ ವೈದ್ಯಾಧಿಕಾರಿಗಳು. ಚಾಸಾ- 16 ಡಾ. ಸವಿತಾ ನನಗೆ ಗೊತ್ತು. ಅದೇ ಪ್ರಕಾರ ಚಾಸಾ- 17 ರಿಂದ 25 ಸಹ ನನಗೆ ಗೊತ್ತಿದ್ದಾರೆ.

ದಿ.25-05-2023 ರಂದು ಸಾಯಂಕಾಲ 5-08 ಸಮಯದಲ್ಲಿ ನಮ್ಮ ಆಡಳಿತಾಧಿಕಾರಿ ಡಾ. ಹನುಮಾನಾಯ್ಕ ಇವರು ಬಂದು ಪಂಚನಾಮೆಗೆ ನಿಮ್ಮ ಹೆಸರು ಕೊಡಿ ಎಂದು ಹೇಳಿದರು. ಆ ಪ್ರಕಾರ ನನ್ನ ಹೆಸರು ಮತ್ತು ಚಾಸಾ-9 ಡಾ. ಕಿರಣ್ ಕಮಾರ್ ಇವರ ಹೆಸರು ಹೇಳಿದರು. ನಮ್ಮ ಆಡಳಿತ ವೈದ್ಯಾಧಿಕಾರಿಗಳು ನಮ್ಮ ಹೆಸರು ಹೇಳಿದರು. ಪೊಲೀಸರು ನಮಗೆ ನೋಟೀಸು ಕೊಟ್ಟರು. ಚಾಸಾ-39 ಅವಿನಾಶ್ ಇವರು ಡಿವಿಆರ್ ನಲ್ಲಿ ಎಂಟು ಕ್ಯಾಮರ ಇದ್ದು , ಸದರಿ ಎಂಟು ಕ್ಯಾಮರಾದಲ್ಲಿ ಕ್ಯಾಮರಾ ನಂ.3 ಮತ್ತು 6 ಕೆಲಸ ಮಾಡುತ್ತಿರಲಿಲ್ಲ , ಇನ್ನುಳಿದ ಕ್ಯಾಮರಾಗಳು ಕೆಲಸ ನಿರ್ವಹಿಸುತ್ತಿದ್ದವು.

ಕ್ಯಾಮರಾ ನಂ.1 ನ್ನು ತುರ್ತು ಚಿಕಿತ್ಸಾ ವಿಭಾಗದಲ್ಲಿ 2 ನೇ ಕ್ಯಾಮರಾ ವನ್ನು

ಎಮರ್ಜನ್ಸಿ ವಾರ್ಡಿನಲ್ಲಿ , 3 ನೇ ಕ್ಯಾಮರಾ ಸಹಿತ ಅದೇ ಏರಿಯಾದಲ್ಲಿದ್ದು , ಅದು ಕೆಲಸ ನಿರ್ವಹಿಸುತ್ತಿರಲಿಲ್ಲ , 4 ನೇ ಕ್ಯಾಮರಾ ಹೆಲ್ಪಡೆಸ್ಕ ನಲ್ಲಿತ್ತು , 5 ನೇ ಕ್ಯಾಮರಾ ಡ್ರೆಸ್ಸಿಂಗ್ ಕೊಠಡಿಯಲ್ಲಿ 6 ನೇ ಕ್ಯಾಮರಾ ಆನ್ ಆಗಿರಲಿಲ್ಲ ಅದು ಸಹ ಅದೇ ಏರಿಯಾದಲ್ಲಿತ್ತು , 7 ನೇ ಕ್ಯಾಮರಾ ಆಸ್ಪತ್ರೆಯ ಹೊರಭಾಗದಲ್ಲಿ , 8 ನೇ ಕ್ಯಾಮರಾ ಪಶ್ಚಿಮದಿಕ್ಕಿನಲ್ಲಿ ಜನರು ಹೋಗುವುದು ಬರುವುದನ್ನು ತೋರಿಸುತ್ತಿತ್ತು.

ಈ ಪ್ರಕರಣಕೆ ಸಬಂಧಪಟ್ಟಂತೆ ದೃಷ್ಯಾವಳಿಗಳ ಬಗ್ಗೆ ಮಾಹಿತಿ ಸಿಗಲಿಲ್ಲ. ಪೊಲೀಸರು ಮಹಜರ್ ಮಾಡುವ ಪೂರ್ವದಲ್ಲಿ ನನಗೆ ನೀಡಿದ ನೋಟೀಸನ್ನು ನೋಡುತ್ತಿದ್ದು, ಅದನ್ನು ನಿಪಿ.25 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಪಿ.25(ಎ) ಎಂದು ಗುರುತಿಸಲಾಯಿತು. ಡಿವಿಆರ್ ಅಮಾನತ್ತುಪಡಿಸಿಕೊಂಡ ಮಹಜರ್ ನೋಡುತ್ತಿದ್ದೆನೆ. ಅದನ್ನು ನಿಪಿ.26 ಎಂದು , ನನ್ನ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋ ಮತ್ತು ಸಿ.ಡಿ ನೋಡುತ್ತಿದ್ದು , ಫೋಟೋಗಳನ್ನು ನಿಪಿ.27 ಮತ್ತು 28 ಎಂದು ಗುರುತಿಸಲಾಯಿತು. ಸಿ.ಡಿ.ಯನ್ನು ನಿಪಿ.29 ಎಂದು ಗುರುತಿಸಲಾಯಿತು. (ಅಮಾನತ್ತು ಪಡಿಸಿಕೊಂಡ ವಸ್ತುಗಳು ಶೀಲ್ಡಕವರನಲ್ಲಿದು, ಅವುಗಳನ್ನು ಓಪನ್ ಮಾಡಲು ನ್ಯಾಯಾವು ಅನುಮತಿ ನೀಡಲಾಯಿತು) ಡಿವಿಆರ್ ನೋಡುತ್ತಿದ್ದು, ಅದನ್ನು ಮು.ಮಾ.6 ಎಂದು ಗುರುತಿಸಲಾಯಿತು.

ಪಾಟೀಸವಾಲುಃ- 1 ಮತ್ತು 2 ನೇ ಆರೋಪಿತರಪರ ಶ್ರೀ ಪಿ.ಬಿ ವಕೀಲರಿಂದ.

ನಮ್ಮ ಆಡಳಿತಾಧಿಕಾರಿಗಳು ಮಹಜರ್ ಗೆ ಹೋಗಿ ಎಂದು ಲಿಖಿತ ಆದೇಶ ಮಾಡಿರುವುದಿಲ್ಲ, ಆದರೆ ಮೌಖಿಕವಾಗಿ ಆದೇಶ ಮಾಡಿರುತ್ತಾರೆ. ನಿಪಿ.25 ನೋಟೀಸಿನಲ್ಲಿ ನಮ್ಮ ಆಡಳಿತಾಧಿಕಾರಿಗಳ ರುಜು ಇರುವುದಿಲ್ಲ. ಆನ್ ಆಗಿದ್ದ ಕ್ಯಾಮರಾಗಳಿಂದ ದೃಷ್ಯಾವಳಿಗಳು ಶೇಖರಣೆಯಾಗಿರುತ್ತವೆ. ಡಾ.ಹನುಮಾನಾಯ್ಕ ಇವರು ಅವಿನಾಶ್ ಇವರನ್ನು ಕರೆಸಿರುತ್ತಾರೆ. ಸದರಿ ಕ್ಯಾಮರಾಗಳಲ್ಲಿ ಅಥವಾ ಡಿವಿಡಿಯಲ್ಲಿ ಏನಾದರೂ ತೊಂದರೆ ಇದ್ದರೆ ಅವರನ್ನು ಕರೆಸುತ್ತಾರೆ ಮತ್ತು ಅವರು 15 ದಿನಕ್ಕೆ ಒಮ್ಮೆ ಬಂದು ಪರೀಕ್ಷಿಸಿ ಹೋಗುತ್ತಾರೆ. ಪೊಲೀಸರು ಮಹಜರ್ ಮಾಡುವ ಸಮಯದಲ್ಲಿ ದೃಷ್ಯಾವಳಿಗಳನ್ನು ನಮಗೆ ತೋರಿಸಿರುವುದಿಲ್ಲ. ಆದರ ಬಗ್ಗೆ ಪರಿಶೀಲನೆ ಮಾಡಿಲ್ಲ. ಸದರಿ ಮಹಜರ್ ಗೆ ನಾನು ಮತ್ತು ಕಿರಣ್ ರವರು ರುಜು ಮಾಡಿರುತ್ತೇವೆ. ಮತ್ತು ಟೆಕ್ನಿಶಿಯನ್ ಅವಿನಾಶ್ ಸಹಿ ಮಾಡಿರುತ್ತಾರೆ. ಹಾಗೂ ಪೊಲೀಸರು ರುಜು ಮಾಡಿರುತ್ತಾರೆ.

ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲದಿದ್ದರೂ ಸಹಿತ ಮಾಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.